# ಶ್ರೀಸಾಮಾನ್ಯರ ಜಂಬೂಸವಾರಿ





ಅರಸು ಪರಂಪರೆಯು ಕೈಗೊಂಡು, ಪ್ರಜಾಪ್ರಭುತ್ವವು ನೆಲೆಗೊಂಡ ಬಳಿಕವೂ ದಸರೆಯ ವೈಭವವು ಅಳಿದುಹೋಗಬಾರದೆಂದು ಸರ್ಕಾರವೇ ಅದನ್ನು ನೆರವೇರಿಸುತ್ತಿದೆ. ಅದಕ್ಕೆ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ ಸಹಕಾರವೂ ಸಿಗುತ್ತಿದೆ. ವಿಜಯದಶಮಿಯಂದು ವೈಭವೋಪೇತವಾದ ಮೆರವಣಿಗೆ ಅರಮನೆಯಿಂದ ಹೊರಟು ಸುಮಾರು ಮೂರುವರೆ ಕಿಲೋಮೀಟರ್‌ಗಳಷ್ಟು ದೂರ ಸಯ್ಯಾಜಿರಾವ್ ರಸ್ತೆ, ಬೊಂಬೂಬಜಾರ್‌ಗಳ ಮೂಲಕ ಸಾಗಿ ಬನ್ನೀಮಂಟಪವನ್ನು ಸೇರಿ, ಅಲ್ಲಿಯೇ ಮುಕ್ತಾಯಗೊಳ್ಳುತ್ತದೆ. ಆನೆಯ ಮೇಲೆ ಏರಿಸಿದ ಅಂಬಾರಿಯಲ್ಲಿ ಮಹಾರಾಜರಿಗೆ ಬದಲಾಗಿ ನಗರಾಧಿದೇವತೆಯೂ ಜಗನ್ಮಾತೆಯೂ ಆದ ಚಾಮುಂಡೇಶ್ವರಿಯನ್ನು ಅಲಂಕರಿಸಿ ಇಡುತ್ತಾರೆ. ವಿವಿಧ ಕ್ಷೇತ್ರಗಳ ಗಣ್ಯ ಮಹನೀಯರು ಮೆರವಣಿಗೆಯ ಮೂಲಸ್ಥಾನವಾದ ಅರಮನೆಯಲ್ಲಿ ನೆರೆದು ಅದಕ್ಕೆ ಚಾಲನೆ ನೀಡುತ್ತಾರೆ. ಚಿತ್ತಾಕರ್ಷಕವಾದ ಸ್ತಬ್ದ ಚಿತ್ರಗಳು ಆ ಮೆರವಣಿಗೆಯಲ್ಲಿ ನಾಡಿನ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತವೆ. ಪ್ಯಾಲೇಸ್ ಬ್ಯಾಂಡ್, ಪೊಲೀಸ್ ಬ್ಯಾಂಡ್, ನಾದಸ್ವರ ಮುಂತಾದ ವಾದ್ಯಗೋಷ್ಠಿಯವರು ಕರ್ಣಾನಂದಕರವಾದ ಸಂಗೀತವನ್ನು ನುಡಿಸುತ್ತ, ಪೂಜಾಕುಣಿತ, ಕೋಲಾಟ, ಪಟ ಕುಣಿತ, ಹುಲಿವೇಷ, ಕರಡಿಮಜಲು, ಚಿಟ್‌ಮೇಳ, ಕಂಸಾಳೆ ನೃತ್ಯ, ಚಿಟಿಕಿಭಜನೆ, ಡೊಳ್ಳು ಕುಣಿತ, ಜಗ್ಗ ಹಲಗೆ ಮೇಳ, ಕೀಲು ಕುದುರೆ ನೃತ್ಯ, ಭೂತ ನೃತ್ಯ, ಗಾರುಡಿ ಬೊಂಬೆ, ಝೂಂಝೂಂ ಪಥಕ್, ಉಮ್ಮತ್ತಾಟ, ಮರಗಾಲು ಕುಣಿತ, ಒನಕೆ ನೃತ್ಯ ಮುಂತಾದ ವಿವಿಧ ಜನಪದ ಕಲಾವಿದ ತಂಡಗಳು ಮೆರವಣಿಗೆಯ ಉದ್ದಕ್ಕೂ ತಮ್ಮ ಕಲಾ ಪ್ರೌಢಿಮೆಯನ್ನು ಮೆರೆಯುತ್ತವೆ.

**ಅಂಬಾರಿಯ ಕಲಾತ್ಮಕತೆ:–**

ಅಂಬಾರಿಯೂ ಒಂದು ಅಪೂರ್ವವಾದ ಕಲಾಕೃತಿ. ಬೀಟೆ ಮರದಿಂದಾದ ದೇವತಾ ಮಂಟಪದಂತಹ ರಚನೆಗೆ ಚಿನ್ನದ ತಗಡನ್ನು ಹೊದಿಸಿದ್ದಾರೆ. ತುದಿಯಲ್ಲಿ ಪಂಚ ಕಲಶಗಳ ಒಕ್ಕೂಟವಿದೆ. ಸಂಪೂರ್ಣವಾಗಿ ದಂತದಿಂದಲೇ ಬಿಡಿಸಿರುವ ಎರಡು ಚಾಮರಗಳು ಅಲ್ಲಿ ನಮ್ಮ ಗಮನಸೆಳೆಯುತ್ತವೆ. ಅದಕ್ಕೆ 80 ಕೆ.ಜಿ. ಚಿನ್ನವನ್ನು ಬಳಸಿದ್ದಾರೆಂದರೆ ಬೆಲೆ ಕಟ್ಟುವುದಾದರೂ ಹೇಗೆ ?. ಅಂಬಾರಿಯನ್ನು ಹೊರಲೆಂದೇ ಶಿಕ್ಷಣ ಪಡೆದು ಪಳಗಿದ ಆನೆಯೊಡನೆ ಇನ್ನೂ ಕೆಲವು ಆನೆಗಳಿರುತ್ತವೆ. ಆನೆಗಳಿಗೆ ಮಾಡಲಾಗುವ ಶೃಂಗಾರವು ಆಕರ್ಷಕವಾಗಿರುತ್ತದೆ. ಬಂಡೀಪುರ ಅರಣ್ಯದಿಂದ ಪರಿಣಿತರಾದ ಮಾವುತರು ಆನೆಗಳೊಡನೆ ಆಗಮಿಸಿ ಅವುಗಳನ್ನು ನಿಯಂತ್ರಿಸುತ್ತ ಮುನ್ನಡೆಸುತ್ತಾರೆ. ಆಮೆರವಣಿಗೆಯ ವೈಭವವನ್ನು ವೀಕ್ಷಿಸಲು ಭರತಖಂಡದ ವಿವಿಧ ಭಾಗಗಳಿಂದಲೂ ವಿಶ್ವದ ವಿಭಿನ್ನ ರಾಷ್ಟ್ರಗಳಿಂದಲೂ ಉತ್ಸಾಹಶೀಲರು ಆಗಮಿಸುತ್ತಾರೆ. ಲಕ್ಷಾಂತರ ಜನ ಮೆರವಣಿಗೆಯ ಪಥದ ಇಕ್ಕೆಲಗಳಲ್ಲೂ ನೆರೆದು ಕುತೂಹಲಭರಿತ ಕಣ್ಣುಗಳಿಂದ ನೋಡುವ ದೃಶ್ಯ ವರ್ಣನಾತೀತವಾದುದು.